



## ‘ರುಕ್ಮಿಣಿ’ಯ ಕಲಾವೈಭೋಗ ಕಂಡೀರಾ

ರುಕ್ಮಿಣಿ ದೇವಾಲಯವು ಗುಜರಾತ್‌ನ ದ್ವಾರಕದ ಸಮುದ್ರ ತೀರದಲ್ಲಿರುವ ಸರಳ, ಅದ್ಭುತ ಕಲಾವೈಭೋಗದ ವಾಸ್ತುಶಿಲ್ಪವನ್ನು ಹೊಂದಿದೆ. 12ನೇ ಶತಮಾನದಲ್ಲಿ, ನಾಗರ ವಾಸ್ತುಶೈಲಿಯಲ್ಲಿ ನಿರ್ಮಾಣವಾಗಿರುವ ಈ ದೇವಾಲಯದ ರಚನೆಯನ್ನು ನೋಡುವುದೇ ಕಣ್ಣಿಗೆ ಹಬ್ಬ. ಈ ವಿನ್ಯಾಸವು ಉದ್ದವಾದ, ಸಂಕೀರ್ಣವಾದ ಗುಮ್ಮಟ ಹೊಂದಿದೆ.

ಗುಮ್ಮಟದ ಮೇಲ್ಭಾವಣಿಯು ಸೊಗಸಾದ ವಾಸ್ತುಶಿಲ್ಪದ ಮೇರು ಕೃತಿಯಾಗಿ ಎದ್ದು ಕಾಣುತ್ತದೆ. ಇದು ಕಲಾತ್ಮಕತೆ ಮತ್ತು ಕರ ಕುಶಲತೆಗೆ ಒಂದು ಅದ್ಭುತ ಉದಾಹರಣೆಯಾಗಿದೆ. ಈ ದೇವಾಲಯವನ್ನು ಸಮುದ್ರದ ಕಲ್ಲಿನಿಂದ ಅಂದವಾಗಿ ನಿರ್ಮಿಸಲಾಗಿದೆ. ಈ ಪ್ರದೇಶದ ಕಲ್ಲು ಉಪ್ಪು ವಾತಾವರಣವನ್ನು ತಡೆದುಕೊಳ್ಳುವ ಶಕ್ತಿ ಹೊಂದಿದೆ. ಕಾಲಾನಂತರದಲ್ಲಿ ರಚನೆಗೆ ಕೆಲವು ವಿರೂಪಗಳು ಕಂಡುಬಂದರೂ ಅದರ ಕೆತ್ತಿದ ಸೌಂದರ್ಯವು ಬಹುಮಟ್ಟಿಗೆ ಹಾಗೇ ಉಳಿದಿದೆ. ಇಲ್ಲಿ ಕಂಡುಬಂದ ಸೊಗಸಾದ ಕೆತ್ತನೆ ಮನಸ್ಸಿಗೆ ಮುದನೀಡಿತು.

–ಎಸ್. ಪ್ರಭಾವತಿ, ಬೆಂಗಳೂರು



## ಕಾನನದೊಳು ಹರಿವ ಎಮ್ಮೆಶರ್ಲ

ಉತ್ತರಕನ್ನಡದ ಯಲ್ಲಾಪುರ ತಾಲ್ಲೂಕಿನಲ್ಲಿ ನೂರಾರು ಜಲಪಾತಗಳಿದ್ದು, ಅವುಗಳ ಪೈಕಿ ಅಜ್ಞಾತವಾಗಿಯೇ ಕಾಡಿನ ಮರೆಯಲ್ಲಿ ಅಡಗಿಕೊಂಡು ಧುಮ್ಮಿಕ್ಕುವ ಜಲಪಾತ ‘ಎಮ್ಮೆಶರ್ಲ’. ಕಡಿದಾದ ಕಣಿವೆಯ ಇಳಿಜಾರಿನಲ್ಲಿ ಅಂದಾಜು ನೂರೈವತ್ತು ಅಡಿ ಎತ್ತರದಿಂದ ಹಾಲ್ನೊರೆಯಾಗಿ ಧುಮ್ಮಿಕ್ಕುತ್ತಿರುವ ಈ ಜಲಪಾತ ನೋಡುಗರನ್ನು ಸೆಳೆಯುತ್ತದೆ. ಯಲ್ಲಾಪುರ ಪಟ್ಟಣದಿಂದ ಕೈಗಾ ಮಾರ್ಗವಾಗಿ ಸಿಗುವ ವಜ್ರಳ್ಳಿಯಿಂದ ಎಂಟು ಕಿ.ಮೀ. ದೂರದ ಕಂಚೀಮನೆಯ ಬಳಿ ಇದೆ. ನಿತ್ಯ ಹರಿದ್ವರ್ಣ ಕಾಡಿನಲ್ಲಿರುವ ಜಲಪಾತದ ದರ್ಶನಕ್ಕೆ ಎರಡು ಕಿ.ಮೀ. ಕಡಿದಾದ ದಾರಿಯಲ್ಲಿ ಸಾಗಬೇಕು. ಹಕ್ಕಿಗಳ ಕಲರವ, ಬೆತ್ತದ ಮುಳ್ಳುಗಳ ನಡುವೆ, ಕಲ್ಲುಮಣ್ಣಿನ ಹಾದಿಯಲ್ಲಿ ಹೆಜ್ಜೆಯೂರಿ ಚಾರಣ ಮಾಡುವುದು ಅದ್ಭುತ ಅನುಭವ. ಬೇಸಿಗೆಯ ಕೊನೆಯ ಎರಡು ತಿಂಗಳು ಈ ಜಲಪಾತದ ಝರಿ ನೀರಿಲ್ಲದೆ ಬಣಗುಟ್ಟುವ ಕಾರಣಕ್ಕೆ ಹೆಚ್ಚಿನ ಪ್ರವಾಸಿಗರು ಬರುವುದಿಲ್ಲ.

–ದತ್ತಾತ್ರೇಯ ಭಟ್ಟ, ಕಣ್ಣಿಪಾಲ



